ದಿನಾಂಕ : 23.08.2024
ಅಸಲು ದಾವೆ: 121/2022
ಪಿ.ಡಬ್ಲ್ಯೂ: 1

<u>ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

**<u>ಪಾಟೀ ಸವಾಲು : ಪ್ರತಿವಾದಿ ಪರ ವಕೀಲರಾದ ಶ್ರೀ ಎಂ.ಎಸ್.ಆರ್ ರವರಿಂದ :</u>**

ಪ್ರತಿವಾದಿ ಮಂಜುನಾಥ್ ರವರು ನನ್ನ ಸಂಬಂಧಿಕರಲ್ಲ, ನನ್ನ ಪರಿಚಯದವರು. ಅವರು ನನ್ನ ಸಹಪಾಠಿಯೂ ಅಲ್ಲ, ಪಕ್ಕದ ಊರಿನವರೂ ಅಲ್ಲ, ನಮ್ಮ ಪಕ್ಕದ ಜಮೀನಿನವರು ಅಲ್ಲ. ಪ್ರತಿವಾದಿ ಮಂಜುನಾಥ್ ರವರಿಗೆ ಎಷ್ಟು ಜನ ಅಕ್ಕ ತಕ್ಕಂಗಿಯರು ಅಣ್ಣ ತಮ್ಮಂದಿರು ಇದ್ದಾರೆ ಗೊತ್ತಾ ಎಂದರೆ ಸಾಕ್ಷಿ ಅವರು ಒಬ್ಬರೇ ಎಂದು ಉತ್ತರಿಸುತ್ತಾರೆ. ಅವರಿಗೆ ಸಹೋದರ ಸಹೋದರಿಯರು ಯಾರು ಇಲ್ಲವಾ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ಸದರಿ ಮಂಜುನಾಥ್ ರವರ ತಂದೆಯ ಜೊತೆ ಹುಟ್ಟಿದವರು ಎಷ್ಟು ಜನ ಎಂಬುದು ನಿಮಗೆ ಗೊತ್ತಾ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಮಂಜುನಾಥ್ ರವರಿಗೆ ಇಬ್ಬರು ಮಕ್ಕಳು ಇರುತ್ತಾರೆ. ಅವರ ಮಕ್ಕಳು ಓದುತ್ತಿದ್ದಾರೆ, ಯಾವ ತರಗತಿಯಲ್ಲಿ ಓದುತ್ತಿದ್ದಾರೆ ಎಂದು ಗೊತ್ತಿಲ್ಲ. ಅವರ ವಯಸ್ಸು ನನಗೆ ಗೊತ್ತಿಲ್ಲ. ಮಂಜುನಾಥ್ ರವರ ಹೆಂಡತಿಯ ಹೆಸರು ಗೊತ್ತಾ ಎಂದರೆ ಸಾಕ್ಷಿ ಮರೆತು ಹೋಗಿದೆ ಎಂದು ಉತ್ತರಿಸುತ್ತಾರೆ. ಮಂಜುನಾಥ್ ರವರು ನಿಮಗೆ ಪರಿಚಯವೇ ಇಲ್ಲ ಎಂದರೆ ಸಾಕ್ಷಿ ಅವರು ಗೊತ್ತು ಎಂದು ಉತ್ತರಿಸುತ್ತಾರೆ.

ನಾನು ವ್ಯವಸಾಯ ಮಾಡುತ್ತೇನೆ, ಗಾರೆ ಕೆಲಸ ಮಾಡವುದಿಲ್ಲ. ನನಗೆ ಬ್ಯಾಂಕ್ ಅಕೌಂಟ್ ಇರುವುದಿಲ್ಲ. ನಾನು income tax ಪಾವತಿದಾರನಲ್ಲ, ನಾನು ಬಿ.ಪಿ.ಎಲ್ ಕಾರ್ಡ್ ದಾರನಾಗಿರುತ್ತೇನೆ ಎಂದರೆ ಸರಿ. ನನಗೆ ವಾರ್ಷಿಕ ಆದಾಯ ರೂ.4 ವರೆ ಲಕ್ಷ ಇರುತ್ತದೆ. ನಿಮಗೆ ತಿಂಗಳಿಗೆ ರೂ.30 ರಿಂದ 40 ಸಾವಿರ ಖರ್ಚು ಇದೆಯಾ ಎಂದರೆ ಸಾಕ್ಷಿ ಅಷ್ಟು ಖರ್ಚು ಇಲ್ಲ ಎಂದು ಉತ್ತರಿಸುತ್ತಾರೆ. ನಾನು ನನ್ನ ತಾಯಿ ಹಾಗೂ ಅಕ್ಕ ಭಾವನ ಜೊತೆ ಇದ್ದೇನೆ. ನನಗೆ ಸೋದರರು ಇರುವುದಿಲ್ಲ, ಇಬ್ಬರು ಅಕ್ಕಂದಿರು ಇದ್ದಾರೆ. ನಿಮಗೆ ಆದಾಯದ ಮೂಲ ಇಲ್ಲ ಎಂದರೆ ಸಾಕ್ಷಿ 2 ಎಕರೆ ಜಮೀನು ಇದೆ, 4 ಎಕರೆ ಗುತ್ತಿಗೆ ಮಾಡಿಕೊಂಡಿದ್ದೇನೆ.

2 ಸ್ವಂತ ಬೋರ್ ವೆಲ್ ಇರುತ್ತದೆ ಎಂದು ಉತ್ತರಿಸುತ್ತಾರೆ. ಈ ಮೇಲೆ ಹೇಳಿದ ಸಂಗತಿಗಳನ್ನು ಪುರಾವೆ ನೀಡಲು ದಾಖಲಾತಿಗಳನ್ನು ಹಾಜರು ಪಡಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ನಿಮಗೆ ಯಾವುದೇ ಜಮೀನು ಇಲ್ಲ, ಗುತ್ತಿಗೆ ಸಹಾ ಮಾಡಿಕೊಂಡಿಲ್ಲ, ಹಾಗೆಯೇ 2 ಬೋರ್ ವೆಲ್ ಗಳು ಸಹಾ ಇಲ್ಲ, ಹಾಗಾಗಿ ನೀವು ಯಾವುದೆ ದಾಖಲಾತಿಗಳನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ನೀವು ಕಡು ಬಡ ಕುಟುಂಬದವರಾದ ಕಾರಣ ಮತ್ತು ಆದಾಯದ ಮೂಲ ಇಲ್ಲದೆ ಇರುವ ಕಾರಣ ನಿಮಗೆ ಬಿ.ಪಿ.ಎಲ್. ಕಾರ್ಡ್ ಕೊಟ್ಟಿರುವುದು ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ.

ಮಂಜುನಾಥ್ ರವರಿಗೆ ರೂ.10 ಲಕ್ಷಗಳನ್ನು ಕೊಟ್ಟಿರುವುದಾಗಿ ಹೇಳಿದ್ದೀರಿ, ಸದರಿ ಹಣವನ್ನು ಯಾರಿಂದಲಾದರೂ ಪಡೆದುಕೊಟ್ಟಿದ್ದೀರಾ ಅಥವಾ ನೀವೇ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಮನೆಯಲ್ಲಿ ಇಟ್ಟುಕೊಂಡಿದ್ದೆನು ಎಂದು ಉತ್ತರಿಸುತ್ತಾರೆ. ಮಂಜುನಾಥ್ ರವರು ಹಣ ಕೇಳಿದ 15 ದಿವಸಕ್ಕೆ ಕೊಟ್ಟಿರುತ್ತೇನೆ. ಮಂಜುನಾಥ್ ರವರು ಪೇಂಟ್ ಕೆಲಸ ಮಾಡುತ್ತಾರೆ. ಅವರಿಗೆ ಎಷ್ಟು ಆದಾಯ ಬರುತ್ತದೆ ಎಂದು ನನಗೆ ಗೊತ್ತಿಲ್ಲ, ಅವರು ಎಷ್ಟು ಖರ್ಚು ವೆಚ್ಚ ಮಾಡುತ್ತಾರೆ ಎಂಬುದು ನನಗೆ ಗೊತ್ತಿಲ್ಲ. ಮಂಜುನಾಥ್ ರವರು ಸೈಟ್ ಖರೀದಿ ಮಾಡಲು ಮತ್ತು ಮನೆ ಖರ್ಚಿಗಾಗಿ ಸಾಲ ತೆಗೆದುಕೊಂಡಿರುತ್ತಾರೆ. ಎಷ್ಟು ವಿಸ್ತೀರ್ಣದ ಸೈಟು ಎಂದು ಕೇಳಿ ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ 30**X**40 ಅಡಿಗಳು ಎಂದು ಉತ್ತರಿಸುತ್ತಾರೆ. ಸದರಿ ಸೈಟು ಒಂದು ಅಡಿಗೆ ಎಷ್ಟು ಬೆಲೆ ಬಾಳುತ್ತದೆ ಎಂದು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ತಿಳಿದುಕೊಂಡಿಲ್ಲ, ಒಂದು ಸಾರಿ ಸೈಟ್ ಹತ್ತಿರ ಹೋಗಿದ್ದೆ ಎಂದು ಉತ್ತರಿಸುತ್ತಾರೆ. ಸೈಟ್ ಫಾರ್ಮೇಷನ್ ಮಾಡಿ ಸೈಟ್ ಹಂಚಲಾಗಿರುತ್ತದೆ. ಯಾರು ಸೈಟ್ ಫಾರ್ಮೇಷನ್ ಮಾಡಿದ್ದಾರೆ ಎಂದು ನಾನು ತಿಳಿದುಕೊಂಡಿರುವುದಿಲ್ಲ. ಎಷ್ಟು ಸೈಟ್ ಗಳು ಇವೆ ಎಂದು ನಾನು ಲೆಕ್ಕ ಹಾಕಿರುವುದಿಲ್ಲ, ಪಕ್ಕದಲ್ಲಿ ಸುಮಾರು ಸೈಟುಗಳು ಇವೆ.

ನೀವು ದುಡ್ಡು ಕೊಟ್ಟಿರುವುದಾಗಿ ಹೇಳಿದ್ದೀರಿ, ಆ ಹಣಕ್ಕೆ ಬಡ್ಡಿ ಏನಾದರೂ ಕೊಡುವುದಾಗಿ ಹೇಳಿದ್ದರಾ ಎಂದರೆ ಸಾಕ್ಷಿ ಹೌದು 1.5% ಮಾಸಿಕ ಬಡ್ಡಿ ಕೊಡುವುದಾಗಿ ಹೇಳಿದ್ದರು ಎಂದು ಉತ್ತರಿಸುತ್ತಾರೆ. ಬಡ್ಡಿ ಕೊಡುವಂತೆ ಸುಮಾರು ಸಾರಿ ನಾನು ಅವರನ್ನು ಕೇಳಿದ್ದೇನೆ, ಆದರೂ ಒಂದು ಪೈಸೆಯನ್ನೂ ಕೊಟ್ಟಿರುವುದಿಲ್ಲ. ನೀವು 2020 ರಲ್ಲಿ ಹಣ ಕೊಟ್ಟಿರುವುದಾಗಿ ಹೇಳಿದ್ದೀರಿ, ಅವರು ಬಡ್ಡಿ ಸಹಾ ಕೊಟ್ಟಿರುವುದಿಲ್ಲ ಎಂದುಹೇಳಿದ್ದೀರಿ,

ಆಗಲೇ ದಾವಾ ಹಾಕಲು ತೊಂದರೆ ಇತ್ತಾ ಎಂದರೆ ಸಾಕ್ಷಿ ಸುಮಾರು ಬಾರಿ ಹೋಗಿ ಕೇಳಿದ್ದೇನೆ, ಆಗ ಕೊಡುತ್ತೇನೆ ಕೊಡುತ್ತೇನೆ ಎಂದು ಹೇಳುತ್ತಾ ಬಂದರು, ಆದರೆ ಕೊಡಲಿಲ್ಲ ಎಂದು ಉತ್ತರಿಸುತ್ತಾರೆ. ನೀವು 10 ಲಕ್ಷಗಳನ್ನು ಬೇರೆಯವರಿಗೆ ಕೊಡುವ ಚೈತನ್ಯವೂ ಇಲ್ಲ, ಹಾಗೆಯೇ, ಆದಾಯದ ಮೂಲಗಳು ಇಲ್ಲ ಎಂದರೆ ಸಾಕ್ಷಿ ಇದೆ ಎಂದು ಉತ್ತರಿಸುತ್ತಾರೆ. ಸಾಕ್ಷಿದಾರರಾಗಿ ಸಹಿ ಹಾಕಿರುವ ಮಂಚೆಗೌಡ ಮತ್ತು ಸಿದ್ದೇಗೌಡ ಒಬ್ಬರು ನಿಮ್ಮ ಊರಿನವರು ಮತ್ತು ಇನ್ನೊಬ್ಬರು ನಿಮ್ಮ ಪಕ್ಕದ ಊರಿನವರು ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಅವರಿಬ್ಬರು ಅಕ್ಕತಂಗಿಯರನ್ನು ಮದುವೆಯಾಗಿದ್ದಾರೆ ಎಂದರೆ ಸರಿ. ಮಂಚೆಗೌಡ ನನ್ನ ಸಂಬಂಧಿಕರಲ್ಲ, ಪರಿಚಯಸ್ಥರು. ಪತ್ರ ಬರಹಗಾರರಾದ ಪ್ರಶಾಂತ್ ರವರು ನಿಮ್ಮ ಪಕ್ಕದ ಊರಿನವರು ಎಂದರೆ ಸಾಕ್ಷಿ ಹೌದು ಆದರೆ ಅವರನ್ನು ಮಂಜುನಾಥ್ ರವರೇ ಕರೆದುಕೊಂಡು ಬಂದಿದ್ದರು ಎಂದು ಉತ್ತರಿಸುತ್ತಾರೆ. ನಿಪಿ.1 ಆನ್ ಡಿಮ್ಯಾಂಡ್ ಪ್ರನೋಟ್ ಮತ್ತು ಹಣ ಸಂದಾಯ ರಶೀದಿಯಲ್ಲಿ ಬರೆದಿರುವ ಒಕ್ಕಣೆಯನ್ನು ನೀವೇ ಹೇಳಿ ಬರೆಸಿರುವುದು ಎಂದರೆ ಸಾಕ್ಷಿ ಮಂಜುನಾಥ್ ರವರು ಹೇಳಿ ಬರೆಸಿರುವುದು ಎಂದು ಉತ್ತರಿಸುತ್ತಾರೆ.

ಮಂಜುನಾಥ್ ರವರು ಲೋಕಸರ ಗ್ರಾಮದವರು ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಸದರಿ ಲೋಕಸರ ಗ್ರಾಮ ಮಂಡ್ಯ ತಾಲ್ಲೂಕು ಹಾಗೂ ನಮ್ಮ ಊರು ಮದ್ದೂರು ತಾಲ್ಲೂಕು ಎಂದರೆ ಸರಿ. ನಮ್ಮ ಊರಿನಿಂದ ಮಂಜುನಾಥ್ ರವರ ಊರು ಲೋಕಸರ ಗ್ರಾಮ ಸುಮಾರು 40 ಕಿ.ಮಿ ದೂರ ಇದೆ ಎಂದರೆ ಸಾಕ್ಷಿ ಅಷ್ಟು ದೂರ ಇಲ್ಲ ಸುಮಾರು 35 ಕಿ.ಮಿ ಇದೆ ಎಂದು ಉತ್ತರಿಸುತ್ತಾರೆ. ನಿಪಿ.1 ರ ಮೇಲೆ ಮಂಜುನಾಥ್ ರವರು ಸಹಿ ಮತ್ತು ಹೆಬ್ಬೆಟ್ಟು ಮಂಜುನಾಥ್ ರವರದಲ್ಲ ಎಂದರೆ ಸಾಕ್ಷಿ ಸಹಿ ಮತ್ತು ಹೆಬ್ಬೆಟ್ಟು ಎರಡನ್ನೂ ಹಾಕಿದ್ದಾರೆ ಎಂದು ಉತ್ತರಿಸುತ್ತಾರೆ. ಆ ಸಹಿ ಮತ್ತು ಹೆಬ್ಬೆಟ್ಟು ಮಂಜುನಾಥ್ ರವರದಲ್ಲ, ನೀವೆ ಸೃಷ್ಟಿ ಮಾಡಿದ್ದೀರಿ ಎಂದರೆ ಸಾಕ್ಷಿ ಸರಿಯಲ್ಲ ಅವರೇ ಹಾಕಿರುವುದು ಎಂದು ಉತ್ತರಿಸುತ್ತಾರೆ. ನಿಪಿ.1 ರಲ್ಲಿ T.M.ಮಂಜುನಾಥ್ ಎಂದು ಬರವಣಿಗೆ ಮಾಡಿರುವುದು ಯಾರು ಎಂದರೆ ಸಾಕ್ಷಿ ಅವರೇ ಬರೆದಿರುವುದು ಎಂದು ಉತ್ತರಿಸುತ್ತಾರೆ. T.M.ಮಂಜುನಾಥ್ ಎಂದು ಬರೆದಿರುವುದು ಪ್ರತಿವಾದಿ ಮಂಜುನಾಥ್ ರವರಲ್ಲ ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸುತ್ತಾರೆ.

ನಿಪಿ.1 ರ ಸಾಕ್ಷಿದಾರರಾದ ಮಂಚೆಗೌಡ ಮತ್ತು ಪ್ರತಿವಾದಿ ಮಂಜುನಾಥ್ ರವರಿಗೂ ಸೈಟ್ ಕೊಳ್ಳುವ ವಿಚಾರವಾಗಿ ಇಬ್ಬರಿಗೂ ತಕರಾರು ಆಗಿದ್ದು, ಆ ಸಂದರ್ಬದಲ್ಲಿ ಪ್ರತಿವಾದಿ

ಮಂಜುನಾಥ್ ರವರು ಆ ಸೈಟನ್ನು ಖರೀದಿಸಿದ್ದು, ಆ ಕಾರಣಕ್ಕಾಗಿ ಮಂಚೆಗೌಡರಿಗೆ ಮಂಜುನಾಥ್ ರವರ ವಿರುದ್ದ ಕೋಪವಿತ್ತು ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ಆ ಕಾರಣಕ್ಕಾಗಿ ಮಂಚೆಗೌಡರವರು ಸೃಷ್ಟಿ ಮಾಡಿದ ಪ್ರನೋಟ್ ಆಧಾರದ ಮೇಲೆ ನಿಮ್ಮ ಕಡೆಯಿಂದ ಈ ರೀತಿ ಸುಳ್ಳು ದಾವೆ ಹಾಕಿಸಿದ್ದಾರೆ ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸುತ್ತಾರೆ. ನೀವು ಮತ್ತು ಸಾಕ್ಷಿದಾರರೆಲ್ಲರೂ ಪರಿಚಯಸ್ಥರು, ಹೇಗಾದರೂ ಮಾಡಿ ಪ್ರತಿವಾದಿ ಮಂಜುನಾಥ್ ರವರ ಸೈಟನ್ನು ಹೊಡೆದುಕೊಳ್ಳಬೇಕು ಎಂದು ಈ ರೀತಿ ಸೃಷ್ಟಿ ಮಾಡಿ ಸುಳ್ಳು ದಾವೆ ಮಾಡಿದ್ದೀರಿ ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸುತ್ತಾರೆ. ಮಂಜುನಾಥ್ ರವರು ನಿಮ್ಮಿಂದ ಹಣ ಪಡೆದುಕೊಳ್ಳುವ ಅವಶ್ಯಕತೆಯೂ ಅವರಿಗಿಲ್ಲ, ನಿಮ್ಮಿಂದ ಹಣವನ್ನು ಪಡೆದಿಲ್ಲ, ನೀವು ಸುಳ್ಳು ಕೇಸ್ ಹಾಕಿದ್ದೀರಿ ಎಂದರೆ ಸಾಕ್ಷಿ ಹಣ ಪಡೆದುಕೊಂಡಿದ್ದಾರೆ ಎಂದು ಉತ್ತರಿಸುತ್ತಾರೆ. ನಾನು ನ್ಯಾಯಾಲಯದಲ್ಲಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮದ್ದೂರು.